## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**- 233/2003 **ಡಿ ಡಬ್ಲ್ಯೂ -2**

**ದಿಃ 06.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ.ಎಸ. ಪವಾರ ವಕೀಲರಿಂದಃ**

ಸದರಿ ದಾವಾವನ್ನು ಯಾವ ಕಾರಣಕ್ಕೆ ದಾಖಲಿಸಿದ್ದಾರೆ ಎಂಬುವುದು ನಿಮಗೆ ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ಈ ದಾವಾದಲ್ಲಿ ಇರುವ ದಾವಾ ಆಸ್ತಿಯ ನಂಬರಗಳನ್ನು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಸರ್ವೆ ನಂಬರ 627 ಎ/3 ಮತ್ತು 623/ಎ 1/4 ಸಿ ಎನ್ನುತ್ತಾರೆ. ಸರ್ವೆ ನಂಬರ 627/ಎ3 4 ಎಕರೆ 10 ಗುಂಟೆ ಇದ್ದು ಅದರಲ್ಲಿ 2 ಎಕರೆ 5 ಗುಂಟೆ ಜಮೀನನ್ನು ಅರ್ಚನಾ ಸುರೇಶ ಅಂದರೆ ಪ್ರತಿವಾದಿ ನಂಬರ 13 ರವರು ಖರೀದಿ ಮಾಡಿದರು. ಮತ್ತೊಂದು ಸರ್ವೆ ನಂಬರನಲ್ಲಿ 2 ಎಕರೆ 2 ಆಣೆ ಇದ್ದು ಅದರಲ್ಲಿ ನಾವು 1 ಎಕರೆ 8 ಆಣೆ ಜಮೀನನ್ನು ಪ್ರತಿವಾದಿ ನಂಬರ 13 ರವರು ಖರೀದಿ ಮಾಡಿರುತ್ತಾರೆ. ಈ ಎರಡು ಆಸ್ತಿಗಳು ಶೇತ್ಕಿ ಜಮೀನುಗಳು ಎಂದರೆ ಸರಿ. ಸದರಿ ಎರಡು ಆಸ್ತಿಗಳ ಮೂಲ ಮಾಲೀಕರು ಯಾರು ಎಂದರೆ ಸಾಕ್ಷಿ ಬೆಣಕಟ್ಟಿ ಪರಿವಾರದವರು ಮತ್ತು ಅವರ ಜಿಪಿಎದಾರರು ಸಿ.ವಿ.ರಟ್ಟಿಹಳ್ಳಿ ವಕೀಲರು ಎನ್ನುತ್ತಾರೆ. ಸದರಿ ವಕೀಲರಿಗೆ ಮೂಲ ಮಾಲೀಕರು ಏನೆಂದು ಜಿಪಿಎ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸದರಿ ಎರಡು ಆಸ್ತಿಗಳನ್ನು ನೋಡಲು ಮತ್ತು ಅವಗಳ ಬಗ್ಗೆ ವ್ಯವಹಾರ ಮಾಡಲು ಬರೆದುಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ.

ಸದರಿ ವ್ಯವಹಾರವನ್ನು ವೈಯಕ್ತಿಕವಾಗಿ ನಾನು ಮಾಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ನಂಬರ 13 ರವರು ನನ್ನ ಹೆಂಡತಿ ಇದ್ದು ಅವರ ವ್ಯವಹಾರದಲ್ಲಿ ನಾನು ಕೂಡಾ ಜೊತೆಯಲ್ಲಿದ್ದೆ ಎನ್ನುತ್ತಾರೆ. ಪ್ರತಿವಾದಿ ನಂಬರ 13 ರವರು ನನ್ನ ಹೆಂಡತಿ ಇದ್ದ ಕಾರಣ ನಾನು ಅವರ ಜೊತೆಯಲ್ಲಿದ್ದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆಸ್ತಿ ಖರೀದಿ ಮಾಡುವ ಪೂರ್ವದಲ್ಲಿ ಸದರಿ ಆಸ್ತಿ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಆಸ್ತಿಗೆ

ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೆ ಎನ್ನುತ್ತಾರೆ. ಈ ಆಸ್ತಿ ಸಂಬಂಧ ರೆವಿನ್ಯೂ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ ಹೊರತು ಬೇರೆ ಎನು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಜಾಗವನ್ನು ಕೂಡಾ ನೋಡಿರುತ್ತೇನೆ ಎನ್ನುತ್ತಾರೆ. ಸದರಿ ವಕೀಲರಿಗೆ ಬರೆದುಕೊಟ್ಟಿರುವ ಜಿಪಿಎ ಓದಿ ನೋಡಿದ್ದೀರಾ ಎಂದರೆ ಸಾಕ್ಷಿ ಓದಿರುತ್ತೇನೆ ಎನ್ನುತ್ತಾರೆ. ಸದರಿ ಜಿಪಿಎ ನೊಂದಣಿ ಆಗಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಎನ್ನುತ್ತಾರೆ, ಸಾಕ್ಷಿ ಮುಂದುವರೆದು ಉಪನೊಂದಣಾಧಿಕಾರಿಯವರನ್ನು ನ್ಯಾಯಾಲಯಕ್ಕೆ ಕರೆಯಿಸಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದುಡಲಾಯಿತು)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ